ದಿನಾಂಕ 08.02.2017 ರ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಬಿಎಂಎನ್ ರವರಿಂದ ಃ

ನಾನು 1993 ರಿಂದ ಪತ್ರ ಬರಹಗಾರನಾಗಿ ಕೆಲಸವನ್ನು ಮಾಡುತ್ತಿದ್ದೇನೆ. ವಿಲ್ ನಾಮೆಯನ್ನು ಬರೆಯಲು ಬಂದಾಗ ಎಷ್ಟು ಸಮಯವಾಗಿತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ ಮಧ್ಯಾಹ್ನ ವಾಗಿರಬಹುದು ಎಂದು ನುಡಿಯುತ್ತಾರೆ. ನಿಪಿ-1 ರ ಛಾಪ ಕಾಗದವನ್ನು ಅಬ್ದುಲ್ ಖಾದರ್ ರವರ ಹೆಸರಿನಲ್ಲಿ ಖರೀದಿಸಲಾಗಿದೆ. ಅದೇರೀತಿ ನಿಪಿ-1ರಲ್ಲಿ ಕೆ ಮುಜೀಬುಲ್ಲಾರವರ ಹಸ್ತ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-1 ನ್ನು ತಯೂರು ಮಾಡುವ ಮೊದಲು ನಾನು ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ವಾದಿಗೆ 14 ಗುಂಟೆ ಜಮೀನು, 1ನೇ ಪ್ರತಿವಾದಿಗೆ 15 ಗುಂಟೆ ಜಮೀನು, ನೂರಹುಸೇನ್‌ಗೆ 15 ಗುಂಟೆ, ಇಕ್ಬಾಲ್ ಅಹಮದ್‌ಗೆ 15 ಗುಂಟೆ ಜಮೀನನ್ನು ನಿಪಿ-1 ರಂತೆ ನೀಡಲಾಗಿದೆ. ನಿಪಿ-1 ನ್ನು ವಾದಿ ಹೆಸರಿಗೆ ಮಾತ್ರ ಬರೆಯಲಾಗಿದೆ. ನಿಪಿ-1 ರಲ್ಲಿ ಮರಗಳ ಬಾಬ್ತು ಬರೆದಿದ್ದು ನಂತರ ಅಡ್ಡಗೆರೆಯನ್ನು ಹಾಕಲಾಗಿದೆ. ಮಜರ್‌ಹುಸೇನ್‌ಗೆ 15ಗುಂಟೆ ಕೆ ಇಕ್ಬಾಲ್ ಅಹಮದ್ ಗೆ 15 ಗುಂಟೆ ಬಿಟ್ಟು ಎಂಬ ಲೈನನ್ನು ಎರಡು ಲೈನುಗಳ ಮಧ್ಯದಲ್ಲಿ ಸೇರಿಸಲಾಗಿದೆ ಎಂದರೆ ಸರಿ. ನಿಪಿ-1ಕ್ಕೆ ಅಬ್ದುಲ್ ಖಾದರ್ ರವರು ಮೊದಲು ಸಹಿ ಮಾಡಿರುತ್ತಾರೆ ನಂತರ ಸಾಕ್ಷಿದಾರರು ನಿಪಿ-1ಕ್ಕೆ ಸಹಿ ಮಾಡಿರುತ್ತಾರೆ. ನಿಪಿ-1ನ್ನು ತಯೂರು ಮಾಡಿದ ಬಗ್ಗೆ ನಾನು ದಿನಚರಿಯನ್ನು ಇಟ್ಟುಕೊಂಡಿರುತ್ತೇನೆ ಅದು ಈಗ ಇಲ್ಲ. ಮುಸ್ಲಿಂ ಧರ್ಮದಲ್ಲಿ ಎಷ್ಟು ಆಸ್ತಿಗಳ ಬಗ್ಗೆ ವಿಲ್‌ನಾಮೆಯನ್ನು ಬರೆಯುವ ಬಗ್ಗೆ ನನಗೆ ಗೊತ್ತು. ನಿಪಿ-1ನ್ನು ನನಗೆ ತಯಾರು ಮಾಡಲು ಮಾಹಿತಿ ನೀಡಿಲ್ಲ ವಿಲ್ ನಾಮೆ ಬರೆದವರಿಗೆ ಆರೋಗ್ಯ ಸರಿಯಿರಲಿಲ್ಲ ಎಂದರೆ ಸರಿಯಲ್ಲ. ವಿಲ್ ನಾಮೆಯಲ್ಲಿ ವಿಲ್‌ನಾಮೆ ಬರೆದವರು ಸಾಕ್ಷಿಗಳು ಸಮಕ್ಷಮ ಸಹಿ ಮಾಡಿದ್ದು ಓದಿ ತಿಳಿದು ಸಹಿ ಮಾಡಿದ್ದೇನೆ ಎಂಬ ಉಲ್ಲೇಖ ವಿಲ್‌ನಾಮೆಯ ಕೊನೆಯಲ್ಲಿ ಇಲ್ಲ ಎಂದರೆ ಸರಿ. ನಿಪಿ-1ರಲ್ಲಿ ವಿಲ್‌ನಾಮೆಯು ಇದು ನನ್ನ ಕೊನೆಯ ವಿಲ್‌ನಾಮೆ ಎಂದು ಬರೆಯಲಿಲ್ಲ ಎಂದರೆ ಸರಿ.

ಮರು ವಿಚಾರಣೆ ಃ ಇಲ್ಲ.

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು,
ಟಿ ನರಸೀಪುರ.